R No KRNN 12

92 - 2 - 1975

ಸ್ವಾ ಮುಖೋದ್ಯವ ನಿರಪೇಕ್ಷರ ಪತ್ರಿಕೆ

in ★ ★ ★ ★ ★

58 th Year ನೇ ವರ್ಷ

ಸತ್ಯವಾದಿ

SATYA

Golden Jubilee Celebrated Paper

Satyavadi Daily

Mysore 4

- For Influential Publicity -

ಸ್ವಾಮಿಕರು ಅರಮನೆ ಸಿರಸ್ತೇದಾರ್ ಎ ... ಸಾದರು ಎಮ್.ಎಸ್ ಶಾಸನಿರ ಎಂ. ಎಸ್ ಕೃಷ್ಣಾವ್ [3 ರ

ಕರ್ನಾಟಕಕ್ಕೆ ಟೆಲಿವಿಷನ್ ಸೆಟ್

ರ

ಶುಭ ಸಂಕೇತ – ದಾರಿ ದೀಪ

ಜನವರಿ 22, 23 ರಂದು ತಿರುಪತಿಯಲ್ಲಿ ಆಂಧ್ರ ಪ್ರದೇಶದ ವಿಶ್ವ ಹಿಂದೂ ಪರಿಷತ್ತಿನವರು ಹಿಂದೂ ಧರ್ಮ ಸಮ್ಮೇಳನವನ್ನು ನಡೆಸಿದರು; ಅಲ್ಲಿ ಗೋಹತ್ಯೆ ಪ್ರತಿಬಂಧಿಸಬೇಕೆಂಬ ತೀರ್ಮಾನವನ್ನು ಸರಕಾರಕ್ಕೆ ಮಾಡಿದರು; ಸಮ್ಮೇಳನದವರು ಏರ್ಪಡಿಸಿದ್ದ ಧಾರ್ಮಿಕ ಪ್ರದರ್ಶನವನ್ನು ಉದ್ಘಾಟಿಸುತ್ತಾ, ಹಿಂದೂ ವಿಶ್ವ ಪರಿಷತ್ತಿನ ಮೂಲಕ ನಡೆಸಲಾಗುವ ಎಲ್ಲಾ ಮಾತೀಯ ಪ್ರಚಾರ ಚಟುವಟಿಕೆಗಳಿಗೆ ತಿರುಪತಿ–ತಿರುಮಲೆ ದೇವಸ್ಥಾನವು ಆರ್ಥಿಕ ಬೆಂಬಲವನ್ನು ಘೋಷಿಸಿದು ಶ್ರೀ ಅಣ್ಣಾರಾಯರು ತಿಳಿಸಿದರು

ವಿಶ್ವ ಹಿಂದೂ ಪರಿಷತ್ತಿನವರು ನಡೆಸುತ್ತಿರುವ ಮತೀಯ ಚಟುವಟಿಕೆಗಳಲ್ಲಿ ಗೋರಕ್ಷಣೆಯೂ ಒಂದು. ಪಶುವಧೆ ತಡೆಗಾಗಿ ವಿಶ್ವ ಹಿಂದೂ ಪರಿಷತ್ತು ಪ್ರಯತ್ನಿಸುತ್ತಾ ಇದೆ; ಅಂದರೆ ಗೋಸಂತಾನಕ್ಕೆ ಸಂಕಟ ಬಂದಾಗ ವೆಂಕಟರಮಣನು ಕಾಪಾಡುತ್ತಾನಂತೆ – ಗೋಪಾಲಕೃಷ್ಣ, ಗೋವರ್ಧನ ಗೋವಿಂದನು, ತಿರುಪತಿಯ ವೆಂಕಟೇಶ್ವರನ ಕೃಪಾದೃಷ್ಟಿಯನ್ನೆ ಹಿಂದೂ ವಿಶ್ವಪರಿಷತ್ತಿನವರು ಆಕರ್ಷಿಸಿಕೊಂಡಿರುವಂತಿದೆ ಕೊಲೆಗಡುಕನಿಂದ ಗೋವನ್ನು ಉಳಿಸಿದರೆ ಸಾಲದು; ಅವುಗಳ ರಕ್ಷಣೆಯೂ ಆಗಬೇಕು; ತಿರುಪತಿ ಮಲೆಯ ಮೇಲೆ ವಿಶಾಲ ಸ್ಥಳವಿದೆ; ದನಕರುಗಳು ಮನಬಂದಂತೆ ಮೇದು ಬರಬಹುದು; ಅವುಗಳ ಪಾಲನೆಯತ್ತ ಗಮನ ಹರಿಸಬೇಕು; ಗೋಶಾಲೆಯನ್ನು ಉತ್ತಮ ಪಡಿಸಲು ಅದು ಅತ್ಯುತ್ತಮ ಸ್ಥಳವಿದೆ ಗೋವಿಂದನ ಬಳಿ ಗೋ ಮಾತೆ ಇರಲೇಬೇಕು. ವಿಶ್ವ ಹಿಂದೂ ಪರಿಷತ್ತು ಈಗ ಈ ಧರ್ಮಿಕ ಚಟುವಟಿಕೆಯತ್ತ ಪೂರ್ಣ ಲಕ್ಷ್ಯವನ್ನೀಯಬಹುದು.

ಬಕ್ತರ ದನಗಳನ್ನು ಸಾಗಿಸುವ ಅತಿಥಿಗಳಿಂದ ಸೋಕುಕಾರಿಗೆ ಮಾರಲಾಗುತ್ತಿದೆ ಎಂಬ ಆರೋಪ ಕೇಳಿಬಂದಿದೆ ಇಲ್ಲವೆಂದು ಆರ್ಥಿಕ ತಜ್ಞರು ಅಭಿಪ್ರಾಯ ಪಟ್ಟರೂ ಆರ್ಥಿಕ ಮುಗ್ಗಟ್ಟನ್ನು ತಪ್ಪಿಸಲಾಗಿ ಕಸಾಯಿಖಾನೆಗೆ ದನಕರುಗಳನ್ನು ಒದಗಿಸುವುದು ಇಂದೂ ತಪ್ಪಿಲ್ಲ. ಈ ಪವಿತ್ರ ಕ್ಷೇತ್ರದಲ್ಲಿ ಭಾರಿ ಯಾಂತ್ರಿಕ ಕಸಾಯಿಖಾನೆಯೊತ್ತು ತೆರೆಯಬೇಕೆಂದು ದನಕರು ಚಿಹ್ನೆ ಇಟ್ಟುಕೊಂಡು ಅಧಿಕಾರದ ಅಂಕುಶವನ್ನು ಹಿಡಿದುಕೊಂಡಿರುವವರು ಯೋಚಿಸುತ್ತಿರುವಾಗ, ಗೋಭಕ್ತರಿಗೆ ಒಂದು ದಾರಿ ದೀಪ ಕಂಡುಬರುತ್ತಿದೆ. ಅಂತಹ ಪಾಪದ ದನಕರುಗಳಿಗಾಗಿ ಅಲ್ಲಿ ಒಂದು ಉತ್ತಮ ಗೋಶಾಲೆಯನ್ನು ವಿಶ್ವ ಹಿಂದೂ ಪರಿಷತ್ತಿನವರು ಆರಂಭಿಸಿದರೆ, ತಿರುಪತಿ ವೆಂಕಟರಮಣನ ದಯಾದೃಷ್ಟಿ ಅಣ್ಣಾರಾಯರೂ ಹೇಳಿರುವಂತೆ ಹರಿದಲ್ಲಿ ಗೋಸಂರಕ್ಷಣೆಯು ದೃಷ್ಟಿಯಿಂದಲೂ, ಕೆಲಸಕಾಗಿ ಅಲೆಯುತ್ತಿರುವರಿಗೆ ಪುಣ್ಯ ಕಾರ್ಯವೇ ಸಿಗುವಂತೆ ಮಾಡುವ ದೃಷ್ಟಿಯಿಂದಲೂ ಒಳ್ಳೆಯದಾದೀತು.

ತಿರುಪತಿಯಲ್ಲಿ ಕಂಡುಬಂದಿರುವ ಈ ಶುಭ ಸಂಕೇತ ಇತರ ರಾಜ್ಯಗಳವರಿಗೂ ದಾರಿದೀಪವಿದೆ ಅದ್ಯಾವ ರಾಜ್ಯದಲ್ಲಿರುವ ವಿಶ್ವ ಹಿಂದೂ ಪರಿಷತ್ತಿನ ಶಾಖೆಯವರು ಈ ಕಾರ್ಯಕ್ಕೆ ಮುಂದೆಬಂದರೆ ಅಲ್ಲಲ್ಲಿನ ದೇವಸ್ಥಾನಗಳು ಧನಸಹಾಯ ಮಾಡಿದರೆ ....ರೆ....ರೆ....ಕೇವಲ ಆದರೆ–ಹೋದರೆಯೆ ವಿಷಯ ಇದಲ್ಲ; ನಡೆಯಬಹುದಾದ ವಿಷಯ ಇದು; ಇದು ಸಕಲ ದೃಷ್ಟಿಗಳಿಂದಲೂ ರಾಷ್ಟ್ರ ಕಲ್ಯಾಣದ ಶುಭ ಸಂಕೇತವಿದೆ; ಸರ್ವ ಸಂಪತ್ತಿಗಳಿಗೂ ದಾರಿದೀಪವಿದೆ.

— ಶಿವಶಂಕರ

○

ಅರಮನೆಯಲ್ಲಿನ ಗಂಧದಮರ ವಶ

ಬೆಂಗಳೂರು – ಸಂಡೂರಿನ ಅರಮನೆ ಮತ್ತು ದೇವಸ್ಥಾನದ ಕೋಠಿಯಲ್ಲಿರುವ ಗಂಧದ ಮರವನ್ನು ಸರಕಾರ ತನ್ನ ವಶಕ್ಕೆ ತೆಗೆದುಕೊಳ್ಳುವುದೆಂದು ಶಾಸನಸಭೆಯಲ್ಲಿ ತಿಳಿಸಲಾಯಿತು – ರೂ 7 ಲಕ್ಷ ಬೆಲೆಬಾಳುವ 10 ಟನ್ನುಗಳಷ್ಟಿವೆಯೆಂದೂ ತಿಳಿಸಲಾಯಿತು

ರಾಜ್ಯಪಾಲರ ಆಯವ್ಯಯ

ಬೆಂಗಳೂರು– ಶಾಸನಸಭೆಯಲ್ಲಿ ಮಂಡಿಸಲಾದ ಬರುವ ವರ್ಷದ ಬಡ್ಜೆಟ್ ರೂ. 30.7 ಕೋಟಿ ಜೋಕಾ ಇದ್ದು, ಆದರ ಭರ್ತಿಗೆ ರೂ. 14 65 ಕೋಟಿ ಹೆಚ್ಚು ತೆರಿಗೆ ವಿಧಿಸಲಾಗಿದೆ – ಮಿಕ್ಕ ರೂ. 17·45 ಕೋಟಿಗೆ ಕೇಂದ್ರ ಬಡ್ಜೆಟ್‌ನಲ್ಲಿಯ ತೆರಿಗೆಗಳಿಂದ ಭರ್ತಿ ಮಾಡಿಕೊಳ್ಳುವ ಅವಕಾಶವನ್ನು ಹೊಂದಲಾಗಿದೆ – ಅರ್ಥ ಮಂತ್ರಿ ಶ್ರೀ ಸೋಸ್ಕೆಡೆಯವರು ಭಾಷಣ ಆರಂಭಿಸಿದಾಗ, ಶ್ರೀ ಬಂಗಾರಪ್ಪನವರು ತೆರಿಗೆ ಇಲ್ಲದ ಬಡ್ಜೆಟ್ ಓದಬೇಕೆಂದರು – ಮಂತ್ರಿಗಳು ಭಾಷಣವನ್ನು ಕನ್ನಡದಲ್ಲಿ ಪ್ರಾರಂಭಿಸಿ ನಂತರ ಇಂಗ್ಲೀಷಿಗೆ ಬದಲಾಯಿಸಿಕೊಂಡರು.

★

ಕಾಂಗ್ರೆಸ್ಸಿಗೆ ಸೋಲು

ಕಾರವಾರ— ಅಂಕೋಲಾ ಪಟ್ಟಣದ 15 ಸದಸ್ಯರ ಪೌರಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ನಿಲ್ಲಿಸಿದ್ದ 9 ಉಮೇದುವಾರರೆಲ್ಲರೂ ಸೋತುಹೋದರು.

●

ಕರ್ನಾಟಕಕ್ಕೆ ಟೆಲಿವಿಜ್ಞ

ನವದೆಹಲಿ— ಈ ವರ್ಷ 6 ಹೊಸ ರಾಜ್ಯಗಳಲ್ಲಿ ಟೆಲಿವಿಜನ್ ಅವರಿಸುವುದೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು – ಕರ್ನಾಟಕ ರಾಜ್ಯವೂ ಈ ಪ್ರಯೋಜನದಲ್ಲಿ ಸೇರಿದೆ.

★

ಚಲನಚಿತ್ರಗಳಿಗೆ ಸಹಾಯದ್ರವ್ಯ

ಬೆಂಗಳೂರು— ರಾಜ್ಯದ ಆರ್ಥಿಕ ಪರಿಸ್ಥಿತಿ ಪ್ರೋತ್ಸಾಹನಾದಾಯಕವಾಗಿಲ್ಲವಿದ್ದರೂ, ರಾಜ್ಯದಲ್ಲಿ ತಯಾರಾದ ಚಲನಚಿತ್ರಗಳಿಗೆ ಸಹಾಯದ್ರವ್ಯವನ್ನು ರೂ 50000 ದಿಂದ ರೂ 1 ಲಕ್ಷಕ್ಕೆ ಹೆಚ್ಚಿಸಿರುವ. ಮತ್ತು ವರ್ಣರಂಜಿತ ಚಿತ್ರಗಳಿಗೆ ರೂ 1 50 ಕ್ಕೆ ಹೆಚ್ಚಿಸುವದು ಬಡ್ಜೆಟ್‌ನಲ್ಲಿ ಕಂಡುಬಂದಿದೆ

ಶಾಲಾಪರಿತ್ಯಾಗ

ಶನವೆಹಲಿ— ಪಾರ್ಲಿಮೆಂಟಿನ ಮಂಜೂರಾತಿ ಇಲ್ಲದೆ ಷೇಕ್ ಅಬ್ದುಲ್ಲರೊಡನೆ ಕಾಶ್ಮೀರ ಬಗ್ಗೆ ಸರಕಾರ ಒಪ್ಪಂದ ಮಾಡಿಕೊಂಡಿರುವುದನ್ನು ಪ್ರತಿಭಟಿಸಿ ಶುಕ್ರವಾರ ಜನಸಂಘದ ಸದಸ್ಯರು ಪಾರ್ಲಿಮೆಂಟಿನ ಎರಡು ಭವನಗಳಲ್ಲೂ ಶಾಲಾ ಪರಿತ್ಯಾಗ ಮಾಡಿದರು

★

ಮುಖ್ಯಮಂತ್ರಿಯವರಿಗೆ ಸವಾಲ್

ಚಂಡಿಘರ— ಹರಿಯಾಣಾ ಶಾಸನಸಭೆಗೆ ಹೊಸದಾಗಿ ಚುನಾಯಿತರಾದ ಶ್ರೀದೇವಿ ಲಾಲರು, ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ, ಮುಖ್ಯ ಮಂತ್ರಿ ಶ್ರೀ ಬನಸಿಲಾಲರು ರಾಜಿನಾಮೆಕೊಟ್ಟು, ತನ್ನ ಎದುರಾಗಿ ರಾಜ್ಯದ ಯಾವ ಕ್ಷೇತ್ರದಿಂದ ಲಾದರೂ ಸ್ಪರ್ಧಿಸಲಿ, ಎಂದು ಸವಾಲು ಹಾಕಿದರು

★

ಸ್ವತಂತ್ರ ಕಾರ್ಯ

ಜಾಂಬಿಯಾ ಸರಕಾರವು ಲೈಂಗಿಕ, ಬೆತ್ತಲೆ, ಅಶ್ಲೀಲ ವಿಷಯಗಳಿರುವ ಚಲನಚಿತ್ರ, ಪತ್ರಿಕೆಗಳು ಮತ್ತಿತರ ಪ್ರಕಾಶನಗಳನ್ನು ಪ್ರತಿಬಂಧಿಸಿದೆ

○

ಬ್ರಿಟನ್ ರಾಜಕುಮಾರ

ನವದೆಹಲಿ– ಬ್ರಿಟನ್ನಿನ ರಾಜಕುಮಾರ ಶ್ರೀ ಫಾಲ್ಸ್ ರಾಷ್ಟ್ರಪತಿ ಭವನವನ್ನು ಸುತ್ತಾಡಿದರು – 1947 ರಲ್ಲಿ ಅಧಿಕಾರ ವರ್ಗಾಯಿಸಲ್ಪಟ್ಟ ಕೊಠಡಿಯನ್ನು ಈಕ್ಷಿಸಿದರು

●

ಮಂತ್ರಿಗಳ ಸಂಬಳ

ಹೈದರಾಬಾದು— ಸರಕಾರವು ಮಂತ್ರಿಗಳ ಸಂಬಳ ಮತ್ತು ಭತ್ಯೆ ಹೆಚ್ಚಿಸುವ ವಿಷಯವನ್ನು ಪರಾಮರ್ಶೆಮಾಡುತ್ತಿದೆ, ಎಂದು ಶಾಸನಸಭೆಯಲ್ಲಿ ತಿಳಿಸಲಾಯಿತು.

ಮಲೇಷಿಯಾಕ್ಕೆ ಸಿಂಹದ ಮರಿ

ಬೊಂಜಾಯಿ— ಗಿರ್ ಸಿಂಹದ ಮರಿಯೊಂದನ್ನು ಮಲೇಷಿಯಾಕ್ಕೆ ಮುಂದಿನ ತಿಂಗಳು ಕಳುಹಿಸಲಾಗುವುದು.

★

ಭಿಕ್ಷುಕರು

ನವದೆಹಲಿ— 1971 ರ ಸೆನ್ಸಸ್‌ನಂತೆ ಭಾರತದಲ್ಲಿ 744500 ಭಿಕ್ಷುಕರು ಬೀದಿಪೋಕರೂ ಇದ್ದರೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು

★

ಖರ್ಚು - ಉಳಿತಾಯ

ನವದೆಹಲಿ— ರಾಜ್ಯ ಸಭೆಯಲ್ಲಿ ಜನಸಂಘದ ಸದಸ್ಯ ಶ್ರೀ ಸುಬ್ರಹ್ಮಣ್ಯ ಸ್ವಾಮಿಯವರು 'ಸ್ತ್ರೀಯರು ಖರ್ಚು ಮಾತ್ರ ಮಾಡುತ್ತಾರೆ, ಉಳಿಸುವುದಿಲ್ಲ' ಎಂದಾಗ, ಅರ್ಥ ಮಂತ್ರಿ ಶ್ರೀ ಸುಬ್ರಹ್ಮಣ್ಯಂರವರು " ಸ್ತ್ರೀಯರು ಉಳಿಸುತ್ತಾರೆ, ಪುರುಷರು ಖರ್ಚು ಮಾಡುತ್ತಾರೆ' ಎಂದು ಹೇಳಿದರು.

●

ಬ್ರಹ್ಮಾಸ್ತ್ರ ಪ್ರಯೋಗ

ಪೂರ್ವ ಬರ್ಲಿನ್ ಕರ್ಟ್‌ವಾಸಿಲಿ ಹೆಂಡತಿಯೊಂದಿಗೆ ಜಗಳ ಕಾದ. ಅವಳಿಗೆ ಪಾಠ ಕಲಿಸಲು ನಿರ್ಧರಿಸಿದ ; ಅವಳನ್ನು ಬೆದರಿಸಲು ಅವಳ ಮೇಲೆ ತಾನು ಸಾಕಿ ಕೊಂಡಿದ್ದ ಪ್ರಾಣಿಗಳನ್ನು ಎಸೆದ ; ಹೆದರಿ ಓಡಿಹೋದ ಅಕೆ ವಾಪಸ್ಸು ಬರಲೇ ಇಲ್ಲ ; ಅವನು ಎಸೆದ ಪ್ರಾಣಿ 80 ಸೆಂಟಿಮಾಟರು ಉದ್ದದ ಎರಡು ಮೊಸಳೆಗಳು.

ವುಡ್‌ಲಾಂಡ್ಸ್ 21 2 75 ರಿಂದ

ಅವೋಘ ಆರಂಭ

ಕನ್ನಾಕುಮಾರಿ

ಅಪೂರ್ವ ಕಲರ್ ಮಲಯಾಳಂ ಕಲಾಕೃತಿ

ಪಾತ್ರ– ಕಮಲಾ ಹಸನ್ ರೀಟಾ ಬಹದ್ದೂರಿ ದಿನ 3 ಪ್ರದರ್ಶನಗಳು

ಅಪೆರಾ 21 2 75 ರಿಂದ

ಬಾಳು ಬೆಳಗಿತು

ಅಮೋಘ ಕನ್ನಡ ಚಿತ್ರ

ಪಾತ್ರ – ರಾಜಕುಮಾರ್ ಜಯಂತಿ ದ್ವಾರಕೀಶ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ

ಪೂರ್ಣ ನಿಶೇಧವಾಗಲಿ

Protect the Cow

SHAKTI

SUDHA

A Superb Tonic

Contribute Liberally

to the National Defence Fund

Quality Printing Neat Binding

Lakshminarasimha Press

Sivarampet Mysore 1

Help The Gorakshana

Humanitarian Propoganda Monthly

Edited Printed and Published by Dharmapracharanirata M S. Krishna Rao (Proprietor) at the Satyavadi Press, Chamarajapuram Mysore